ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು ಜೆಎಂಎಫಸಿ ನ್ಯಾಯಾಲಯ
ಹುಮನಾಬಾದ
**ಖಾಸಗಿ ಫಿರ್ಯಾದಿ ಸಂ. 26-2025**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. **ದಿ.11-08-2025**

| | | |
|---|---|---|
| ಹೆಸರು | : | ಸುರೇಖ |
| ತಂದೆ/ಗಂಡನ ಹೆಸರು | : | ಸುಂದರ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಮನೆಕೆಲಸ |
| ವಿಳಾಸ | : | ಬೀದರ. |

ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ

1 ನೇ ಆರೋಪಿ ನನ್ನ ಗಂಡ. ದಿ: 06-06-2012 ರಂದು ನನ್ನ ಹಾಗೂ 1 ನೇ ಆರೋಪಿ ವಿವಾಹವು ಸೂಪರ ಪಂಕ್ಷನ ಹಾಲನಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆ ಆಗಿರುತ್ತದೆ. 2 ನೇ ಆರೋಪಿ 1 ನೇ ಆರೋಪಿಯ 2 ನೇ ಹೆಂಡತಿ ಆಗಬೇಕು 3 ನೇ ಆರೋಪಿ 1 ನೇ ಆರೋಪಿಯ ಗಂಡ ಆಗಬೇಕು 4 ನೇ ಆರೋಪಿ ಅತ್ತಿಗೆ ಆಗಬೇಕು. 5 ಮತ್ತು 6 ನೇ ಆರೋಪಿತರು 1 ನೇ ಆರೋಪಿತನ ಅಣ್ಣ ಮತ್ತು ಅತ್ತಿಗೆ ಆಗಬೇಕು. 7 ಮತ್ತು 8 ನೇ ಆರೋಪಿತರು 1 ನೇ ಆರೋಪಿಯ ತಮ್ಮ ಹಾಗೂ ತಮ್ಮನ ಹೆಂಡತಿ ಆಗಬೇಕು. 8 ಮತ್ತು 9 ನೇ ಆರೋಪಿತರು 1 ನೇ ಆರೋಪಿಯ ಸಹೋದರಿಯರು ಆಗಬೇಕು. 11 ನೇ ಆರೋಪಿ 2 ನೇ ಆರೋಪಿಯ ತಾಯಿ ಆಗಬೇಕು. 12 ನೇ ಆರೋಪಿ 2 ನೇ ಆರೋಪಿಯ ತಂಗಿ ಆಗಬೇಕು. 13 ನೇ ಆರೋಪಿಯು ಎರಡನೆಯ ಆರೋಪಿಯ ತಂಗಿ ಆಗಬೇಕು. 14 ನೇ ಆರೋಪಿಯು ಎರಡನೆಯ ಆರೋಪಿಯ ತಮ್ಮ ಆಗಬೇಕು. 15 ಮತ್ತು 16 ನೇ ಆರೋಪಿತರು ಎರಡನೆಯ ಆರೋಪಿಯ ತಂಗಿ ಯರು ಆಗಬೇಕು. 17 ನೇ ಆರೋಪಿಯು 12 ನೇ ಆರೋಪಿಯ ಗಂಡ ಆಗಬೇಕು.

ನನ್ನ ಮದುವೆಯಾದ ನಂತರ ನಾನು 1 ನೇ ಆರೋಪಿ ಮನೆ ಆದ ದುಬಲಗುಂಡಿ ಗ್ರಾಮಕ್ಕೆ ಹೋಗಿ 1 ವರ್ಷ ಜೀವನ ನಡೆಸಿರುತ್ತೇನೆ. ನಮ್ಮಿಬ್ಬರ ವೈವಾಹಿಕ ಜೀವನದಿಂದ ಪ್ರಜ್ವಲ ಎಂಬ 1 ಗಂಡು ಮಗು ಜನಿಸಿರುತ್ತದೆ ನಂತರ 1 ನೇ ಆರೋಪಿ ಮಧ್ಯಪಾನ ಸೇವನೆ ಮಾಡಿ ಹೊಡೆಯುತ್ತಿದ್ದನು. 1 ನೇ ಆರೋಪಿ ಮನೆಯಲ್ಲಿ ನಾನು 5 ವರ್ಷ ಜೀವನ ಮಾಡಿರುತ್ತೇನೆ.

ದಿ: 11-04-2018 ರಂದು 1 ನೇ ಆರೋಪಿ ನನ್ನ ಜೊತೆ ಜಗಳ ಮಾಡಿ ಮನೆಯಿಂದ ನನ್ನನ್ನು ಹೊರ ಹಾಕಿರುತ್ತಾನೆ ನಂತರ ಗೌರಾವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಎಮ ಸಿ ನಂಬರ 44/2023 ರಂತೆ ವಿವಾಹ-ವಿಚ್ಛೇದನಾ ಕೋರಿ ಅರ್ಜಿ ಸಲ್ಲಿಸಿರುತ್ತಾನೆ ಸದರಿ ಅರ್ಜಿ ಇನ್ನು ಚಾಲ್ತಿಯಲ್ಲಿರುತ್ತದೆ.

3 ರಿಂದ 17 ನೇ ಆರೋಪಿತರೆಲ್ಲರೂ ಸೇರಿ ದಿ: 08-07-2021 ರಂದು ಠಾಣಾ ಪಂಕ್ಷನ ಹಾಲ ಕಮಲನಗರದಲ್ಲಿ 2 ನೇ ಆರೋಪಿಯೊಂದಿಗೆ 2 ನೇ ವಿವಾಹ ಮಾಡಿರುತ್ತಾರೆ. 1 ನೇ ಆರೋಪಿ ಚಿಕ್ಕಪ್ಪನಾದ ಬಾಬುರಾವ ಖಜೂರೆ, ಸುನಿಲ ಮೇತ್ರೆ ರವರು ಹೋಗಿ 1 ನೇ ಆರೋಪಿದು ಈಗಾಗಲೇ ಮದುವೆ ಆಗಿರುತ್ತದೆ ಮರು ಮದುವೆ ಯಾಕೆ ಮಾಡುತ್ತೀರಾ ಅಂತಾ ಕೇಳಿದರೂ ಸಹ ಅವರ ಮಾತು ಕೇಳದೆ ಮದುವೆ ಮಾಡಿರುತ್ತಾರೆ. 2 ನೇ ಮದುವೆಯು ಸಹ ಹಿಂದೂ ಧರ್ಮದ ಸಂಪ್ರದಾಯದಂತೆ ಆಗಿರುತ್ತದೆ. ಆರೋಪಿತರೆಲ್ಲರಿಗೂ 1 ನೇ ಆರೋಪಿಯೊಂದಿಗೆ ನನ್ನ ಮದುವೆ ಆಗಿರುವ ವಿಚಾರ ಗೊತ್ತಿದ್ದರೂ ಸಹ ನಾನು ಜೀವಂತ ಇದ್ದರೂ 1 ಮತ್ತು 2 ನೇ ಆರೋಪಿತರು ಮದುವೆ ಮಾಡಿಸಿರುತ್ತಾರೆ. 1 ನೇ ಆರೋಪಿ ಚಿಕ್ಕಪ್ಪನಾದ ಬಾಬುರಾವ ಖಜೂರೆ, ಸುನಿಲ ಮೇತ್ರೆರವರು ಬಂದು 1 ನೇ ಆರೋಪಿ ಮರು ಮದುವೆ ಆದ ವಿಚಾರ ನನಗೆ ತಿಳಿಸಿರುತ್ತಾರೆ. 2 ನೇ ಮದುವೆ ಆದ ವಿಚಾರ ಅವರು ವಾಸ ಮಾಡುವ ಸ್ಥಳಕ್ಕೆ ಹೋಗಿ ನೊಡಿರುತ್ತೇನೆ ಹಾಗೂ ಅವರ ಮದುವೆ ಭಾವಚಿತ್ರಗಳನ್ನು ನೋಡಿರುತ್ತೇನೆ . ನಾನು 1 ನೇ ಆರೋಪಿಯ ಕಾನೂನು ಬದ್ಧ ಹೆಂಡತಿ ಆಗಿದ್ದು ನಾನು ಜೀವಂತ ಇರುವಾಗಲೇ ಈ ಎಲ್ಲ ವಿಚಾರ ಎಲ್ಲ ಆರೋಪಿತರಿಗೂ ಗೊತ್ತಿದ್ದರೂ ಸಹ 1 ನೇ ಆರೋಪಿಯೊಂದಿಗೆ 2 ನೇ ಆರೋಪಿಗೆ ಮರುವಿವಾಹ ಮಾಡಿದ ಎಲ್ಲ ಆರೋಪಿತರಿಗೂ ಶಿಕ್ಷೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.